# ಬೃಹಚ್ಚರಣ


**ಸಂಪಾದಕ ಸಮಿತಿ**

| | |
|---|---|
| ಎಸ್. ಸೋಮಸುಂದರ | ಪ್ರಧಾನ ಸಂಪಾದಕ |
| ವಿ. ಎಸ್. ಮಣಿ | ಕಾರ್ಯದರ್ಶಿ |
| ಕೆ.ಸಿ. ನಟರಾಜನ್ | ಸಂಚಾಲಕರು |
| ಅಚಲ ರಮೇಶ್ | ಸದಸ್ಯರು |
| ವೈ.ಜಿ. ಗಿರಿಶಾಸ್ತ್ರಿ | ಸದಸ್ಯರು |
| ಕೆ.ಎಸ್. ಮಧುಸೂದನ | ಗೌ॥ ಸಂಪಾದಕ |


ಸಂಪುಟ : 3 ಸಂಚಿಕೆ : 2 ತ್ರೈಮಾಸಿಕ ವಾರ್ತಾ ಪತ್ರ ಖಾಸಗಿ ಪ್ರಸಾರಕ್ಕಾಗಿ ಏಪ್ರಿಲ್–ಜೂನ್ 2013



## ಅರ್ಪಣೆ

**ಬೃಹಚ್ಚರಣ**

**ಈ ಸಂಚಿಕೆಯನ್ನು ಪ್ರಸಿದ್ಧ ಕನ್ನಡ ಸಾಹಿತಿ ಭಾರತಿ ಸಂಪಂಗಿರಾಮ ಅವರಿಗೆ ಶ್ರದ್ಧೆ ಹಾಗೂ ಗೌರವಗಳಿಂದ ಅರ್ಪಿಸಿದೆ.**

ಚಿತ್ರಕೃಪೆ: ಡಾ॥ ಟಿ.ವಿ. ವೆಂಕಟಾಚಾಲಶಾಸ್ತ್ರೀ

## ಸಂಪಾದಕೀಯ

ಎಲ್ಲಾರ್‍ಕ್ಕೊ ನಮಸ್ಕಾರುಂಗು. ಇಂದ್ ಸಲತಿ ಸಂಚಿಕೇಲೆ ಕೊಂಚು ಪುದೂ ವಿಷಯುಂಗು ಅದೆ. ಪಿನ್ನಿ ತಲೆಮಾರ್‍ಲೆ ಇರ್‍ಂದ್ ನಮ್ದೇಲ್ವಾ ಆನ ಭಾರತಿ ಸಂಪಂಗಿರಾಮ ಅವಾಳ್ಕು ಇಂದ್ ಸಂಚಿಕೆಯೆ ಅರ್ಪೀಕಾನೆ ಅದೆ. ಅವ ಸುಮಾರು ಅಂಬಿತ್ತಂಜಿ (55) ಪುಸ್ತುಕುಂಗ್ಫೆ ವಳದವಾಳೆ. ಸರ್ವಸದಸ್ಯರ್ದ್ದೆ ಸಭೇಲೆ ಶಾನೆ ಪೇರು 'ಬೃಹಚ್ಚರಣ' ಸಂಚಿಕೆಯೆ ಮೆಚ್ಕುಂಡವಾಳೆ. ಎಲ್ಲಾರ್‍ಕ್ಕೊ ಕೃತಜ್ಞತೆಗಿ. ಬೃಹಚ್ಚರಣತೀಲ್ವಾಳ್ಕು ಚೇಂದಿರ್‍ಕ್ಕರವಾಳ್ದೆ ಒರು ಶಾಸನತಿ ವಿಚಾರ್‍ಮೆ ಇಂದ್ಸಂಚಿಕೇಲೆ ಪೋಟದೆ. ಪಳೇಕಾಲ್ತಿ ಫೋಟೋಗು ಇರಂದ್ಕ ಅನ್ಪೀಯೊಂಗೊ. ನಲ್ಲದು.



■ ಕೆ.ಎಸ್. ಮಧುಸೂದನ

## ಅಧ್ಯಕ್ಷರ ನುಡಿ

*ಆತ್ಮೀಯ ಬಂಧುಗಳಿಗೆ ನಮಸ್ಕಾರ*

ಕರ್ನಾಟಕ ರಾಜ್ಯದಲ್ಲಿ ನೂತನ ಕಾಂಗ್ರೆಸ್ ಸರ್ಕಾರ ರಚನೆಯಾಗಿರುವ ಈ ಸಂದರ್ಭದಲ್ಲಿ ಶಾಸನಸಭಾ ಸದಸ್ಯರಿಗೆ, ಸಚಿವರಿಗೆ ಹಾಗೂ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರಿಗೆ ಬೃಹಚ್ಚರಣ ಸಂಘ ಶುಭ ಹಾರೈಸುತ್ತದೆ.

ದಿನಾಂಕ: 26–5–2013ರಂದು ನಡೆದ 2012–13ನೇ ಸಾಲಿನ ಸರ್ವಸದಸ್ಯರ ಸಭೆಯು, ಸುವ್ಯವಸ್ಥೆಯಿಂದ ಕೂಡಿದ್ದು, ಸದಸ್ಯರ ಬಿಚ್ಚುನುಡಿಗಳು, ಉತ್ತಮಸಲಹೆಗಳಿಂದ ಕೂಡಿದ್ದುದು ಸಂತೋಷದ ವಿಷಯ. ಹಿತಕರವಾಗಿ ನಡೆದ ಸಭೆಯನ್ನು ಉತ್ತಮ ಮುಕ್ತಾಯದೊಂದಿಗೆ ಮುಗಿಸಿದ ಸಂದರ್ಭದಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಭಾಗವಹಿಸಿದವರೆಲ್ಲರಿಗೂ ಅಭಿನಂದನೆಗಳು. ನಾನಾ ಕಾರಣಗಳಿಂದ ಸಭೆಗೆ ಹಾಜರಾಗದವರು, ಮುಂದಿನ ನಮ್ಮ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಕೋರುತ್ತೇನೆ.

ಸಭೆಯನ್ನು ಶ್ರೀ ಟಿ.ಎಸ್. ರಮೇಶ್‌ರವರ ಸ್ವಾಗತದೊಂದಿಗೆ ಶ್ರೀ ಕುಕ್ಕೆಸುಬ್ರಹ್ಮಣ್ಯ ಸ್ವಾಮಿ ಸಮುದಾಯ ಭವನದಲ್ಲಿ ಪ್ರಾರಂಭಿಸಲಾಯಿತು. ಕಾರ್ಯದರ್ಶಿ ಶ್ರೀ ವಿ.ಎಸ್. ಮಣಿಯವರ ಪ್ರಾಸ್ತಾವಿಕ ನುಡಿಯಲ್ಲಿ 2011–12ರ ವಾರ್ಷಿಕ ಸರ್ವಸದಸ್ಯರ ಸಭೆಯ ನಿರ್ಣಯಗಳ ಅನುಷ್ಠಾನ, ಹಿಂದಿನ ಒಂದು ವರ್ಷದಲ್ಲಿ ಸಂಘದ ಕಾರ್ಯಚಟುವಟಿಕೆಗಳ ವರದಿ, ಮುಂದಿನ ವರ್ಷಗಳಲ್ಲಿ ಹಾಕಿಕೊಳ್ಳುವ ಕಾರ್ಯಕ್ರಮಗಳ ವಿವರವು ಸದಸ್ಯರಿಗೆ ಮೆಚ್ಚುಗೆಯಾಯಿತು.

2012–13ರಲ್ಲಿ ನಮ್ಮನ್ನಗಲಿದ ನಮ್ಮ ಸಮುದಾಯದ ಮೂವತ್ತು ಸದಸ್ಯರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

2012–13ನೇ ಸಾಲಿನ ಸಂಘದ ಲೆಕ್ಕಪತ್ರ ವಾರ್ಷಿಕ ವರದಿಯನ್ನು ಖಜಾಂಚಿ ಶ್ರೀ ಸತ್ಯನಾರಾಯಣರವರು ಸಭೆಯಲ್ಲಿ ಮಂಡಿಸಿದರು. ಸರ್ವಾನುಮತದಿಂದ ಲೆಕ್ಕಪತ್ರವರದಿಯ ಅನುಮೋದನೆಯನ್ನು ಶ್ರೀ ನಡವತ್ತಿ ಸುಂದರ್‌ರವರು ಸೂಚಿಸಿದ್ದು, ಶ್ರೀ ಎನ್.ವಿ. ಗೋಪಾಲಯ್ಯ ಹಾಗೂ ನೆರೆದ ಎಲ್ಲ ಸದಸ್ಯರೂ ತಮ್ಮ ಕೈಎತ್ತಿ ಒಪ್ಪಿಗೆ ಸೂಚಿಸಿದರು.

ಸಭೆಯಲ್ಲಿ ದೇವರನಾಮ ಹಾಡಿದ ಶ್ರೀಮತಿ ಮೀನಾಕ್ಷಿ ವೆಂಕಟೇಶ್, ಪ್ರಾರ್ಥನೆ ಮಾಡಿದ ಶ್ರೀಮತಿ ಲಲಿತಾ ರಮೇಶ್ ಹಾಗೂ ಅಚಲ ರಮೇಶ್ ಸಭೆಯ ಕೊನೆಯಲ್ಲಿ ಕೀರ್ತನೆ ಮಾಡಿದ ನಾಗರಾಜ್ ದಂಪತಿಗಳು, ಶಂಕರಸ್ತುತಿಯನ್ನು ಹಾಡಿದ ನಡುವತ್ತಿ ಗೋಪಾಲಯ್ಯನವರಿಗೆ ಹಾಗೂ ಕಾರ್ಯಕ್ರಮ ನಿರೂಪಿಸಿದ ಶ್ರೀಮತಿ ಸರಸ್ವತಿ ನಟರಾಜ್‌ರವರಿಗೆ ಧನ್ಯವಾದಗಳು.

ಉತ್ತಮ ಸಲಹೆಗಳನ್ನು ನೀಡಿದ ಸದಸ್ಯರುಗಳಿಗೆ ಸಂಘವು ಆಭಾರಿಯಾಗಿದ್ದು, ಮುಂದಿನ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಅದರ ಬಗ್ಗೆ ತೀರ್ಮಾನ ಕೈಗೊಂಡು ಎಲ್ಲ ಸದಸ್ಯರಿಗೆ ತಿಳಿಸಲಾಗುತ್ತದೆ.

ಲೆಕ್ಕ ಪರಿಶೋಧಕರಾದ ಶ್ರೀ ಬಿ.ಎನ್.ಜಿ. ಪ್ರಸಾದ್ ಹಾಗೂ ಬಿ.ಎನ್.ಜಿ. ಕುಮಾರ್‌ರವರು ಸಂಘಕ್ಕೆ ನೀಡಿರುವ ಸಹಕಾರಕ್ಕೆ ಕೃತಜ್ಞತೆಗಳು.

ಕಾರ್ಯಕಾರಿ ಸಮಿತಿಯ ಸದಸ್ಯರು ಸಂಘದ ಏಳಿಗೆಗೆ ನಡೆಸುವ ಪ್ರತಿಯೊಂದು ಸಭೆಗೂ ತಗಲುವ ವೆಚ್ಚವನ್ನು ತಾವೇ ಭರಿಸುತ್ತಿರುವುದಕ್ಕಾಗಿ ಸದಸ್ಯರುಗಳು ಸಂತಸವನ್ನು ವ್ಯಕ್ತಿಪಡಿಸಿದರು.

ಪ್ರೊ॥ ಕೆ.ಎಸ್. ಮಧುಸೂದನರವರ ಸಂಪಾದಕತ್ವದಲ್ಲಿ ಹೊರಬರುತ್ತಿರುವ 'ಬೃಹಚ್ಚರಣ' ವಾರ್ತಾಪತ್ರಕೆಯ ಬಗ್ಗೆ ಸದಸ್ಯರೆಲ್ಲಾ ಮೆಚ್ಚುಗೆ ವ್ಯಕ್ತಪಡಿಸಿರುವುದು ಸಂತೋಷ. ಹೆಚ್ಚಿನ ಮಾಹಿತಿಗಳಿಂದ ಸರ್ವರೂ ಓದುವಂತೆ ಸುಂದರ ಸಂಚಿಕೆಯು ಹೊರ ಬರಬೇಕೆಂಬುದು ನಮ್ಮ ಬಯಕೆ. ತಾವುಗಳು ಲೇಖನ, ಛಾಯಾಚಿತ್ರಗಳನ್ನು ಕಳುಹಿಸುವ ಸಹಕಾರ ನೀಡಿ, ಜಾಹಿರಾತುಗಳಿಗೆ ಆಹ್ವಾನ ನೀಡುತ್ತೇವೆ.

ಕೆಲವರ ಸಲಹೆಯಂತೆ ಧಾರ್ಮಿಕ ಕ್ಷೇತ್ರಗಳಿಗೆ ಒಂದು ದಿನದ ಪ್ರವಾಸ ಮಾಡಲು ತೀರ್ಮಾನಿಸಿದ್ದು, ವಿವರಗಳನ್ನು ಮುಂಚಿತವಾಗಿ ತಿಳಿಸಲಾಗುತ್ತದೆ. ಸಂಘವು ಮುಂದಿನ ತಿಂಗಳು ನಡೆಸಬೇಕೆಂದಿರುವ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ, 75 ವಸಂತಗಳು ತುಂಬಿರುವ ಹಿರಿಯ ಚೇತನಗಳಿಗೆ ಗೌರವಾರ್ಪಣೆ ಹಾಗೂ ಕಲಾವಿದರಿಗೆ ತಮ್ಮ ಪ್ರತಿಭೆ ಪ್ರದರ್ಶನಕ್ಕೆ ವೇದಿಕೆ ಏರ್ಪಡಿಸುವ ಕಾರ್ಯಕ್ರಮಕ್ಕೆ ತಮ್ಮ ಸಂಬಂಧಿಗಳಿದ್ದರೆ ತಿಳಿಸಿ. ತಮ್ಮೆಲ್ಲರ ಸಹಕಾರ ಅವಶ್ಯ. ನನ್ನೊಂದಿಗೆ ಯಾವುದೇ ಸ್ವಾರ್ಥವಿಲ್ಲದೆ ಕೆಲಸವನ್ನು ನಿರ್ವಹಿಸುತ್ತಿರುವ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಿಗೂ ಹಾಗೂ ತಮಗೆ ಶುಭವಾಗಲಿ.



■ ಎಸ್. ಸೋಮಸುಂದರ

## ಮೈ.ಮಂ.ದ್ರಾ.ಬೃ. ಸಂಘದ ಕಾರ್ಯಕಾರಿ ಸಮಿತಿ

ಅಧ್ಯಕ್ಷರು : ಎಸ್. ಸೋಮಸುಂದರ
ಉಪಾಧ್ಯಕ್ಷರು : ಕೆ.ಬಿ. ಮುರಳಿ
ಕೆ. ಮಂಜುನಾರಾಯಣ್
ಕಾರ್ಯದರ್ಶಿ : ವಿ.ಎಸ್. ಮಣಿ
ಸಹಕಾರ್ಯದರ್ಶಿ : ವಿ. ಅರುಣ
ಖಜಾಂಚಿ : ಎಸ್. ಸತ್ಯನಾರಾಯಣ
ಲೆಕ್ಕಪರಿಶೋಧಕರು : ಎಚ್.ಕೆ. ಶಶಿಧರ್

ಸದಸ್ಯರು : ಆರ್.ಎ. ಈಶ್ವರನ್, ಟಿ.ಎಸ್. ಮಣಿ, ಎಸ್. ಶ್ರೀನಿವಾಸನ್, ಆರ್. ಗೋಪಾಲಕೃಷ್ಣ, ಎಸ್. ಸಿ. ಶ್ರೀನಿವಾಸ, ಬಿ. ಶ್ರೀಧರ್, ಕೆ. ಜಿ. ವೆಂಕಟೇಶ್, ಸರಸ್ವತಿ ನಟರಾಜನ್, ಎ.ವಿ. ಮಂಜುನಾಥ, ಟಿ.ಪಿ. ಸೂರ್ಯನಾರಾಯಣ, ಗಣೇಶ ಶ್ರೀಧರ್, ಟಿ.ಎಸ್. ನಾಗೇಶ್, ಟಿ.ಎಸ್. ರಮೇಶ್, ಕೆ.ಸಿ. ನಟರಾಜನ್

ಸಲಹೆ : ಕೆ ಎಸ್ ಮದುಸೂದನ

## ಹೊಸ ಸದಸ್ಯರು

| | |
|---|---|
| ಬಿ.ಪಿ. ಸಂದೀಪ್ | ಕೆ. ಮಂಜುನಾಥ್ |
| ಎ.ಆರ್. ರವಿ | ಚಿ॥ ಧಾತ್ರಿ ಆರ್. ಪ್ರಸಾದ್ |
| ಎ.ವಿ. ಜಗದೀಶ್ | ರಾಮಸ್ವರೂಪ್ ಸೂರ್ಯಪ್ರಕಾಶ್ |
| ಎನ್. ಗೋವಿಂದ ನಾರಾಯಣ್ | ವೆಂಕಟೇಶ್ ಬಾಬು |
| ಟಿ.ಎನ್. ರವಿಕಿರಣ್ | ಮೇಘನ ರವಿಕುಮಾರ್ |
| ಶಾಂತಾ ವೆಂಕಟೇಶ್ | ಬಿ.ವಿ. ಜಯರಾಮನ್ |
| ಶ್ರೀಮತಿ ಟಿ.ಎಸ್. ಚಂಪಕ | ಎನ್. ಗಣೇಶನ್ |
| ಎಸ್. ಶಂಕರ್ | |

ಪೋಷಕರು

ಎನ್.ವಿ. ರಮೇಶ್, ಉಮೇಶ್ ಸೋಮಶೇಖರ್

## ಹುಟ್ಟುಹಬ್ಬದ ಶುಭಾಶಯಗಳು



ನಮ್ಮ ಸಂಘದ ಅಧ್ಯಕ್ಷ ಶ್ರೀ ಎಸ್. ಸೋಮಸುಂದರ ಹಾಗೂ ಪೋಷಕ ಶ್ರೀ ಎಸ್. ಚಂದ್ರಶೇಖರ್‌ರವರು ತಮ್ಮ ತಂದೆ, ಬೃಹಚ್ಚರಣ ಸಂಘದ ಸ್ಥಾಪಕ, ಪೋಷಕ, ಹಿರಿಯ ಚೇತನರಾದ ಶ್ರೀ ಸಣ್ಣೆ ಸೂರಪ್ಪನವರಿಗೆ, 90ನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಿರುತ್ತಾರೆ. **'ಬೃಹಚ್ಚರಣ'** ಈ ಸಂದರ್ಭದಲ್ಲಿ ಹಿರಿಯರಾದ ಶ್ರೀ ಸಣ್ಣೆ ಸೂರಪ್ಪನವರು, ನೆಮ್ಮದಿ ಹಾಗೂ ಆರೋಗ್ಯದಿಂದ ನಮ್ಮೊಂದಿಗಿರಲೆಂದು ಆಶಿಸುತ್ತದೆ. ಕುಟುಂಬದ ಎಲ್ಲಾ ಸದಸ್ಯರಿಗೂ ಶುಭ ಕೋರುತ್ತದೆ.

## ಬೃಹಚ್ಚರಣ ಗ್ರಾಮಗಳು - 6. ನಂಜನಗೂಡು

(ಮೈಸೂರಿನಿಂದ ಆಗ್ನೇಯಕ್ಕೆ 24 ಕಿ.ಮೀ.)



**ನಂಜನಗೂಡು** ಅಪ್ಪಟ ಕನ್ನಡನಾಡಿನ ಒಂದು ಊರು. ಇದು **ನಂಜುಂಡ** (=ವಿಷವನ್ನು ಉಂಡವನು, **ಈಶ್ವರ**) ವಾಸವಾಗಿರುವ ಗೂಡು(=ಹಳ್ಳಿ). ನಂಜುಂಡನ ಸಂಸ್ಕೃತಭಾಷಾರೂಪವೇ ಶ್ರೀಕಂಠೇಶ್ವರ. **ನಂಜನಗೂಡಿನ ನಂಜುಂಡ** ಅಪ್ಪಟ ದ್ರಾವಿಡ ದೇವರು. ಈ ಊರು ಮೈಸೂರಿನಿಂದ ಆಗ್ನೇಯಕ್ಕೆ 24 ಕಿ.ಮೀ ದೂರದಲ್ಲಿದೆ. ಕಪಿಲಾ ನದಿಯ ಬಲದಂಡೆಯ ಮೇಲಿದೆ. ವ್ಯಾಪಾರ ಕೇಂದ್ರ, ಕಾಗದದ ಕಾರ್ಖಾನೆ, ಸುಗಂಧ ದ್ರವ್ಯಗಳ ಕಾರ್ಖಾನೆ, ಬಟ್ಟೆ ಗಿರಣಿಗಳು ಇವೆ. ಆಯುರ್ವೇದ ಔಷಧಿ ತಯಾರಿಕಾ ಕೇಂದ್ರವೂ ಹೌದು. ನಂಜನಗೂಡು ಶ್ರೀಕಂಠಶಾಸ್ತ್ರಿಗಳು ಮತ್ತು ತಿರುಮಲಾಂಬ ಪ್ರಸಿದ್ಧ ಕನ್ನಡ ಸಾಹಿತಿಗಳು.

ಶೋಧಿತ ನೀರು ಸೌಕರ್ಯ, ಪಶುವೈದ್ಯ ಶಾಲೆ, ಆಸ್ಪತ್ರೆ, ಹಲವಾರು ಶಾಲಾ ಕಾಲೇಜುಗಳಿವೆ. ಪ್ರತಿ ಶುಕ್ರವಾರ ಸಂತೆ ನಡೆಯುತ್ತದೆ.

**ಉಮ್ಮತ್ತೂರು** ಮತ್ತು **ಕಳಲೆ** ಪಾಳೆಯಗಾರರ ಆಳ್ವಿಕೆಯಲ್ಲಿದ್ದ **ನಂಜನಗೂಡು** ನಂತರ **ಮೈಸೂರು ಅರಸರ** ಆಳ್ವಿಕೆಯಲ್ಲಿ ಉಚ್ಛ್ರಾಯ ಸ್ಥಿತಿಗೇರಿತು. ತನ್ನ ನೆಚ್ಚಿನ ಆನೆಯ ಖಾಯಿಲೆ **ನಂಜುಂಡ ದೇವರಿಗೆ** ಹರಸಿಕೊಂಡ ಕಾರಣದಿಂದಾಗಿ ವಾಸಿಯಾದದ್ದರಿಂದ **ಟಿಪ್ಪು ಸುಲ್ತಾನ** ಅತ್ಯಂತ ಗೌರವ ಭಕ್ತಿಗಳಿಂದ ಈ ದೇವರನ್ನು **ಹಕೀಂ ನಂಜುಂಡ** ಎಂದೇ ನಿರ್ದೇಶಿಸಿ ಈ ದೇವಾಲಯಕ್ಕೆ **ಪಚ್ಚೆ ಲಿಂಗ**ವನ್ನು ಅರ್ಪಿಸಿದನು.

ಮೂರು ತಲೆಮಾರುಗಳ ಹಿಂದೆ ನಂಜನಗೂಡಿನ ಈ ದೇವಾಲಯಕ್ಕೆ ನಮ್ಮ **ಬೃಹಚ್ಚರಣ** ಜನಾಂಗದ **ಶ್ರೀಕಂಠಯ್ಯ**ನವರು ಪಾರುಪತ್ತೇದಾರ ರಾಗಿದ್ದರು. **ಕುತ್ಸಗೋತ್ರಕ್ಕೆ** ಸೇರಿದ ಇವರ ಮನೆತನದವರೇ **ನಂಜನಗೂಡು ನಾರಾಯಣ ಸ್ವಾಮಿ** ಹಾಗೂ ಅವರ ಪುತ್ರಪೌತ್ರಾದಿ ಪರಂಪರೆಯವರು.

53,900 ಚದರ ಅಡಿಗಳ ವಿಸ್ತೀರ್ಣದ ಹಾಗೂ 147 ಕಂಬಗಳನ್ನುಳ್ಳ ನಂಜನಗೂಡಿನ ಈ ಬೃಹತ್ ದೇವಾಲಯ ದ್ರಾವಿಡ ಶೈಲಿಯ ದೇವಾಲಯವಾಗಿದ್ದು 385 ಅಡಿ ಉದ್ದ ಹಾಗೂ 140 ಅಡಿ ಅಗಲದ್ದಾಗಿದ್ದು **ಕರ್ನಾಟಕದಲ್ಲೇ** ಅತಿ ದೊಡ್ಡ ದೇವಾಲಯವಾಗಿದೆ.

**ದೊಡ್ಡ ಜಾತ್ರೆ (ಪಂಚ ರಥೋತ್ಸವ)** ಹಾಗೂ **ಗಿರಿಜಾ ಕಲ್ಯಾಣ** ಈ ದೇವಾಲಯದ ವಿಶೇಷ. ಇಂತಹ **ನಂಜುಂಡ ದೇವರು** ಹಲವಾರು **ಬೃಹಚ್ಚರಣ** ಕುಟುಂಬಗಳ ಮನೆದೇವರು.

■ ಭಾಮ

## ಸರ್ವಸದಸ್ಯರ ಸಭೆ 26-05-2013



ಸದಸ್ಯರನ್ನು ಸ್ವಾಗತಿಸುತ್ತಿರುವ ಕಾರ್ಯಕಾರಿ ಸಮಿತಿ




ಪ್ರಾರ್ಥನೆ – ಶ್ರೀಮತಿ ಲಲಿತ ರಮೇಶ್ ಮತ್ತು ಕು॥ ಅಚಲ



ಪ್ರಾಸ್ತಾವಿಕ ನುಡಿ – ಕಾರ್ಯದರ್ಶಿ ಶ್ರೀ ಮಣಿ




“ಬೃಹಚ್ಚರಣ” ಸಂಚಿಕೆ ಬಗ್ಗೆ ಸಂಪಾದಕ ಪ್ರೊ॥ ಕೆ.ಎಸ್. ಮಧುಸೂದನ



ಹಿರಿಯ ಸದಸ್ಯ ಶ್ರೀ ಬಿ.ಎಸ್. ಪದ್ಮನಾಭ



ಹಿರಿಯ ಪೋಷಕ ಸದಸ್ಯರು



ಶ್ರೀಮತಿ ಮೀನಾಕ್ಷಿ ವೆಂಕಟೇಶ್‌ರಿಂದ ದೇವರ ನಾಮ



ಶ್ರೀ ಸೋಮಸುಂದರ ಅವರಿಂದ ಅಧ್ಯಕ್ಷರ ಭಾಷಣ

## ಬ್ರಾಹ್ಮಣ ಶಾಸಕರಿಗೆ ಅಭಿನಂದನೆ

ಕರ್ನಾಟಕ ವಿಧಾನಸಭೆಗೆ ನೂತನವಾಗಿ ಆಯ್ಕೆಯಾದ ಬ್ರಾಹ್ಮಣ ಶಾಸಕರಾದ ಶ್ರೀಯುತ ಆರ್. ವಿ. ದೇಶಪಾಂಡೆ, ದಿನೇಶ್ ಗುಂಡುರಾವ್, ಎಸ್. ಸುರೇಶ್‌ಕುಮಾರ್, ಎಲ್.ವಿ. ರವಿಸುಬ್ರಹ್ಮಣ್ಯ, ಬಿ.ಎನ್. ವಿಜಯಕುಮಾರ್, ರಮೇಶ್‌ಕುಮಾರ್, ವೈ.ಎಸ್.ವಿ. ದತ್ತ, ವಿಶ್ವೇಶ್ವರ ಹೆಗಡೆ ಕಾಗೇರಿ, ಅರಬೈಲ ಶಿವರಾಮ ಹೆಬ್ಬಾರ್, ಕೆ.ಬಿ. ಪ್ರಸನ್ನಕುಮಾರ್ ಅವರುಗಳಿಗೆ 'ಬೃಹಚ್ಚರಣ' ಅಭಿನಂದಿಸುತ್ತದೆ.

## ಶುಭ ಹಾರೈಕೆ



ಸಂಘದ ಸದಸ್ಯ, ಲಯ ವಿದ್ವಾನ್ ಶ್ರೀ ಗುರುಪ್ರಸನ್ನ ಹಾಗೂ ಶ್ರೀ ಶಿವಪ್ರಸಾದ್‌ರವರು, ತಮ್ಮ ತಂದೆ, ಸಂಘದ ಹಿರಿಯ ಸದಸ್ಯ ಶ್ರೀ ಗುಂಡಪ್ಪನವರಿಗೆ 70 ವಸಂತಗಳ ಹುಟ್ಟುಹಬ್ಬವನ್ನು, 21–4–13ರಂದು, ಜಯನಗರದ ಶ್ರೀರಾಮ ದೇವಸ್ಥಾನದಲ್ಲಿ, ಧಾರ್ಮಿಕ ವಿಧಿಗಳೊಂದಿಗೆ ನೆರವೇರಿಸಿದರು. 'ಬೃಹಚ್ಚರಣ' ಶ್ರೀ ಗುಂಡಪ್ಪನವರ ಕುಟುಂಬದವರಿಗೆ ಶುಭ ಕೋರುತ್ತದೆ.

## ಅಭಿನಂದನೆ

ಸಂಘವು ಪ್ರಕಟಿಸುತ್ತಿರುವ **"ಬೃಹಚ್ಚರಣ"** ಪತ್ರಿಕೆಯನ್ನು ಮೆಚ್ಚಿ ಸಂಘದ ಸದಸ್ಯರಾದ ನಡವತ್ತಿ ಶ್ರೀ **ಸುಂದರ್**ರವರು 1010/– ರೂ.ಗಳನ್ನು ಹಾಗೂ ನಡವತ್ತಿ ಶ್ರೀ **ಗೋಪಾಲಯ್ಯ**ನವರು 1000/– ರೂ.ಗಳನ್ನು ನೀಡಿರುವುದಕ್ಕೆ ಸಂಘವು ಆಭಾರಿಯಾಗಿದ್ದು, ಇದೇ ರೀತಿಯ ಸಹಕಾರವನ್ನು ಇತರ ಸದಸ್ಯರಿಂದಲೂ ಅಪೇಕ್ಷಿಸುತ್ತದೆ.

## ನೇಮಕ



ನಗರದ ವಾಣಿ ಜ್ಯೋತಿಷ್ಯ ತರಬೇತಿ ಮತ್ತು ಸಂಶೋಧನಾ ಟ್ರಸ್ಟ್ ಪ್ರಾಂಶುಪಾಲರಾದ ಎಂ.ಎಸ್. ಶ್ರೀಕಂಠಯ್ಯ ಅವರು 'ಹಸ್ತ ಸಾಮುದ್ರಿಕಾ ಶಾಸ್ತ್ರ'ದಲ್ಲಿ ಮಂಡಿಸಿದ ಪ್ರಬಂಧವನ್ನು ಪರಿಗಣಿಸಿ ಕೊಲ್ಕತ್ತದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಓರಿಯೆಂಟಲ್ ಹೆರಿಟೇಜ್ ಮತ್ತು ವಿಶ್ವ ಜ್ಯೋತಿಷ ವಿದ್ಯಾಪೀಠವು ಅವರನ್ನು ನಗರದ ಸಂಸ್ಥೆಗೆ ಪ್ರಾಧ್ಯಾಪಕರನ್ನಾಗಿ ನೇಮಕ ಮಾಡಿದೆ. ಅವರಿಗೆ **'ಬೃಹಚ್ಚರಣ'**ದ ಅಭಿನಂದನೆಗಳು.

## ಶಾಶ್ವತ ಅನ್ನಸಂತರ್ಪಣ ನಿಧಿಯ ದಾನಿಗಳು

(ಕಳೆದ ಸಂಚಿಕೆಯಿಂದ)

| | | ರೂ.ಗಳು |
|---|---|---|
| 97. | ಎ. ರವಿಕುಮಾರ್ | 1,500–00 |
| 98. | ಜಿ.ಎನ್. ನಾಗಪ್ರಕಾಶ್ | 1,500–00 |
| 99. | ಉಮೇಶ್ ಸೋಮಶೇಖರ್ | 25,000–00 |
| 100. | ಸಂತೋಷ್ | 4,000–00 |
| 101. | ಮೇಘನಾ ರವಿಕುಮಾರ್ | 15,000–00 |
| 102. | ಆರ್.ವಿ. ಗೋಪಿನಾಥ್ | 5,000–00 |
| 103. | ಎಸ್.ಪಿ. ಶ್ರೀನಿವಾಸ್ | 5,000–00 |
| 104. | ಎಚ್.ಪಿ. ಶ್ರೀನಿವಾಸ್ | 1,500–00 |
| 105. | ಅಶ್ವತ್ಥ ನಾರಾಯಣ | 15,00–00 |
| 106. | ಸೇತುರಾಂ ಕಾ.ಗೋ. | 1,500–00 |

*(ಮುಂದುವರೆಯುವುದು)*

## ವಧು ಬೇಕಾಗಿದೆ

ಹೆಸರು : **ಮಂಜೇಶ್ ಶರ್ಮ**, ಬಿ.ಎ.
ಹುಟ್ಟಿದ ದಿನಾಂಕ : **3–10–1984**
ನಕ್ಷತ್ರ : ಉತ್ತರಾಷಾಡ 4ನೇ ಪಾದ
ರಾಶಿ : ಮಕರ
ಉದ್ಯೋಗ : ಕರ್ನಾಟಕ ಸರ್ಕಾರದ ವಾರ್ತಾಇಲಾಖೆಯಲ್ಲಿ ಹಿರಿಯ ಸಹಾಯಕ
ಮೊಬೈಲ್ : **9845113475 (ನಟರಾಜ್)**
**9845997488 (ಮಂಜೇಶ್ ಶರ್ಮ)**

## ಪ್ರತಿಭಾ ಪುರಸ್ಕಾರ ಮತ್ತು ಹಿರಿಯಚೇತನಗಳಿಗೆ ಸನ್ಮಾನಕ್ಕೆ ಕೋರಿಕೆ

**2012–13ನೇ ಸಾಲಿನ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳಲ್ಲಿ 80% ಗೂ ಹೆಚ್ಚು ಅಂಕಗಳನ್ನು ಪಡೆದಿರುವ ಸಮುದಾಯದ ವಿದ್ಯಾರ್ಥಿಗಳಿಗೆ ಹಾಗೂ 75 ತುಂಬಿದ ಹಿರಿಯ ಚೇತನಗಳಿಗೆ ಸನ್ಮಾನಿಸಲು ಕಾರ್ಯಕ್ರಮ ಹಮ್ಮಿಕೊಂಡಿದೆ. ಅರ್ಹ ವಿದ್ಯಾರ್ಥಿಗಳು ಹಾಗೂ ಹಿರಿಯ ಚೇತನಗಳು ತಮ್ಮ ವಿವರಗಳನ್ನು ಹಾಗೂ ವಿಳಾಸವನ್ನು ಸಂಘದ ಅಧ್ಯಕ್ಷರಿಗೆ ಅಥವಾ ಕಾರ್ಯದರ್ಶಿಗಳಿಗೆ ಕಳುಹಿಸಲು ಕೋರಿದೆ.**

## ನಮ್ಮನ್ನಗಲಿದ ನಮ್ಮವರಿಗೆ ಶ್ರದ್ಧಾಂಜಲಿ

ಶ್ರೀ ಕೆ.ಎಸ್. ಸೀತಾರಾಮಯ್ಯ, ಪದ್ಮನಾಭನಗರ
ಶ್ರೀಮತಿ ಗೀತಾ ರಾಮಚಂದ್ರ
ಶ್ರೀಮತಿ ನಾಗಮ್ಮ ಸುಬ್ಬ ಐಯರ್
ಶ್ರೀಮತಿ ಶುಭಮತಿ ಅಟ್ಟೂರು ಗಿರಿ
ಶ್ರೀ ವಾಸುದೇವನ್ ಛಾಯಾಪತಿ (LIC)

## ಸಮುದಾಯದ ಸ್ವಯಂ ಉದ್ಯಮಿಗಳ ಗಮನಕ್ಕೆ



ಸ್ವಯಂ ಉದ್ಯೋಗ ಕೈಗೊಂಡಿರುವ ನಮ್ಮ ಸಮುದಾಯದ ಯುವ ಜನಾಂಗಕ್ಕೆ, ಬೃಹಚ್ಚರಣ ಸಂಘದ ಕಾರ್ಯಕಾರಿ ಸಮಿತಿಯು ಉತ್ತೇಜನ ನೀಡುವ ದಿಶೆಯಲ್ಲಿ ಅವರು ನಡೆಸುವ ಉದ್ಯಮದ ವಿವರಗಳನ್ನು ನೀಡಿದಲ್ಲಿ **'ಬೃಹಚ್ಚರಣ'** ಪತ್ರಿಕೆಯಲ್ಲಿ ಪ್ರಕಟಿಸುತ್ತದೆ.

ಕುಮಾರಿ ಪದ್ಮಶ್ರೀ ಮುರಳಿ ಹಾಗೂ ಶ್ರೀಮತಿ ಸುಪ್ರಿಯಾ ಮುರಳಿರವರು, **ಬೀಡ್ ಅಡೋರ್ನ್ಡ್ (Beed Adorned)** ಸಂಸ್ಥೆ ಸ್ಥಾಪಿಸಿ, ಹೆಣ್ಣುಮಕ್ಕಳ ಅಲಂಕಾರ ವಸ್ತುಗಳನ್ನು ತಯಾರಿಸಿ ಮಾರುತ್ತಿರುತ್ತಾರೆ.

ವಿವರಗಳಿಗೆ ಸಂಪರ್ಕಿಸಿ : **9482834747, 9739764140**

## ಅಭಿನಂದನೆಗಳು



**ಮಟ್ಟನಹಳ್ಳಿ ರಾಮಸ್ವಾಮಿ ಸೂರ್ಯನಾರಾಯಣರವರು ಶಾಶ್ವತ ಅನ್ನಸಂತರ್ಪಣಾ ನಿಧಿಗೆ ರೂ. 10,000/- ದೇಣಿಗೆ ನೀಡಿರುವುದಕ್ಕೆ ಸಂಘವು ಅಭಿನಂದಿಸುತ್ತಾ ಅವರ ಕುಟುಂಬ ಸದಸ್ಯರಿಗೆ ಶುಭ ಕೋರುತ್ತದೆ.**

## ಗಮನಿಕೆ

ಸಂಘದ ಸದಸ್ಯರಾಗಿ

**ಪೋಷಕರು** : ರೂ. 5,000/-

**ಸದಸ್ಯತ್ವ** : ರೂ. 1,000/-

## ಗಣೇಶ ಸ್ತುತಿ

ರಾಗ: ಷಣ್ಮುಖ ಪ್ರಿಯ — ಆದಿತಾಳ

ಓಂ ಗಜಾನನ ನಿನಗೆ ನಮನ ।
ಅಜವಂದನ ಗಿರಿಜಾನಂದನ ॥ಪ॥

ಸುಜನಪಾಲನ ಗಜವದನ ।
ಭಜನ ಪ್ರೀತ ಮೂಷಿಕ ವಾಹನ ॥ಅ.ಪ.॥

ಜನ್ಮ ಜನ್ಮಾಂತರ ದುರಿತ ಶಮನ ।
ಜನ್ಮಜನ್ಮದಿ ಪರಿಪಾಲನ ।
ಜನ್ಮ ಪಾವನ ಗಣೇಶ ಸ್ತವನ ।
ಜನ್ಮದಾತ ಕೇಶವಭಗಿನಿ ವಂದನ ॥ಓಂ॥

## ದುರ್ಗಾಸ್ತುತಿ

ರಾಗ: ಮಾಯಾಮಾಳವಗೌಳ — ಆದಿತಾಳ

ಶೂಲಿನಿ ದಯಪಾಲಿನಿ ।
ಶಾಲಿನಿ ಭಕ್ತವಾಸಿನಿ ॥ಪ॥

ಶಾರ್ವರಿ ಶಿವೇ, ಅಂಬಿಕೆ ।
ಶಂಕರಿ ಉಮಾ ಮೂಕಾಂಬಿಕೇ ।
ಶಾಂಭವಿ ಅಮ್ಮ ಭೈರವಿ ।
ಶಾತೋದರಿ ಕೃಪಾಸಾಗರೀ ॥ಶೂಲಿನಿ॥

ಪಾರ್ವತಿ ಗಿರಿಜೇ ಭಗವತಿ ।
ಉರ್ವಿಯಲಿ ನೀ ದಯಾವತಿ ।
ಕೇಶವ ಭಗಿನಿ ಭವಾನಿ ।
ಕೈ ಹಿಡಿಯೆ ಜ್ಯೋತಿ ಸ್ವರೂಪಿಣೆ ॥ಶೂಲಿನಿ॥

## ಶಿವಸ್ತುತಿ

ರಾಗ: ಪೀಲು — ಆದಿತಾಳ

ಗೌರಿ ರಮಣ ತೋರೋ ಕರುಣ ।
ಪರಮ ಕಲ್ಯಾಣ ಉರಗಭೂಷಣ ॥ಪ॥

ದುರಿತಹರಣ ನಾಗಾಭರಣ ।
ಕರುಣಾ ಪೂರ್ಣ ವಂದಿತ ಚರಣ ॥1॥

ನೀಡೋ ಸ್ಮರಣ ಭಸ್ಮಭೂಷಣ ।
ಭಕ್ತರ ಪ್ರಾಣಾ ಶಿವನಾಮ ಸ್ಮರಣ ॥2॥

ನಿರುತ ಶ್ರವಣ ಗಿರಿಜಾರಮಣ ।
ಕೇಶವ ಭಗಿನಿ ಕಲಿಮಲ ಹರಣ ॥3॥

■ ವಿದುಷಿ ಭ್ರಮರ ಗೋಪಿನಾಥ್



# ನಮ್ಮಮ್ಮನ ಕೋಡುಬಳೆ



ಎಲ್ಲ ತಿಂಡಿಗಳನ್ನೂ ಚೆನ್ನಾಗಿ ತಯಾರಿಸುತ್ತಿದ್ದರೂ ನಮ್ಮಮ್ಮ ಮಾಡುತ್ತಿದ್ದಂತಹ ಕೋಡುಬಳೆ, ಪಕೋಡ, ಮುಚ್ಚಾರೆಗಳನ್ನು ನಾನು ಬೇರೆ ಎಲ್ಲಿಯೂ ನೋಡಲಿಲ್ಲ. ಕೋಡುಬಳೆ, ಅನೇಕ ಸೈಜುಗಳಲ್ಲಿ, ಆಕಾರಗಳಲ್ಲಿ ಎಲ್ಲೆಲ್ಲಿಯೂ ನೋಡಲು ಸಿಗುತ್ತವೆ. ಆದರೆ ಆ ರುಚಿ, ಆ ಬಣ್ಣ, ಆ ಘಮಲು, ಆ ಮಾರ್ದವತೆಯೊಡನೆ ಸೇರಿದ ಗರಗು, ಗಟ್ಟಿತನ, ಅದು ಎಲ್ಲಿಯೂ ಕಾಣುವುದಿಲ್ಲ. ಮುಖ್ಯವಾಗಿ ಅಕ್ಕಿಹಿಟ್ಟು, ತೆಂಗಿನಕಾಯಿ, ಮೆಣಸಿನಕಾಯಿ ಮಿಶ್ರಣದಿಂದ ಎಣ್ಣೆಯಲ್ಲಿ ಕರಿದು ತಯಾರಾಗುತ್ತದೆ ಕೋಡುಬಳೆ. ಆದರೆ ಈಚೆಗೆ ಅಂಗಡಿಗಳಲ್ಲಿ ಬಹುದಿನ ಉಳಿಯಬೇಕೆಂಬ ಉದ್ದೇಶದಿಂದ ಹೆಚ್ಚು ಕಡಲೆಹಿಟ್ಟು, ಕೊಬ್ಬರಿ ಬಿದ್ದು ಕೋಡಬಳೆಯ ಆಕಾರ ಹಿಂದಿನಂತೆಯೇ ಇದ್ದರೂ ಅದರ ರುಚಿ ನಾಶವಾಗಿ ಹೋಗುತ್ತದೆ, ಅದು ಬೇರೆಯೇ ತಿಂಡಿಯಾಗಿ ಪರಿವರ್ತಿತವಾಗುತ್ತದೆ. ನಮ್ಮಮ್ಮ ತಯಾರಿಸುತ್ತಿದ್ದ ಈರುಳ್ಳಿ ಪಕೋಡ, ಮುಚ್ಚಾರೆಗಳೂ ಮೆತ್ತಗೂ ಅಲ್ಲದೆ, ಗಟ್ಟಿಯಾಗೂ ಅಲ್ಲದೆ, ಸಪ್ಪೆಯೂ ಅಲ್ಲದ, ಖಾರವೂ ಅಲ್ಲದ ಮಾಧುರ್ಯದಿಂದ ಕೂಡಿ, ಒಂದು ಪರಿಮಳದೊಡನೆ ರಂಜಿಸುತ್ತಿತ್ತು. ಅವರು ತಯಾರಿಸುತ್ತಿದ್ದಂತಹ ಗುಳಪಾವಟೆ, ಪೊರಿ ಮಾವುಗಳೂ ಇಂದು ಕಾಣಲು ಸಿಗುವುದೇ ಇಲ್ಲ. ನಾನು ಮದರಾಸಿನಲ್ಲಿ ವಾಸಿಸುತ್ತಿದ್ದಾಗ ಹದಿನೈದು ದಿನ, ತಿಂಗಳಿಗೊಂದು ಸಲ ನಾನು ಬೆಂಗಳೂರಿನಿಂದ ಕೋಡಬಳೆ, ರವೆ ಉಂಡೆಯ ಗಂಟಿನೊಡನೆ ಹಿಂದಿರುಗುತ್ತಿದ್ದೆ. ಈ ವಸ್ತುಗಳನ್ನು ಒಂದು ವಾರಕ್ಕೆ ಕಡಿಮೆಯಿಲ್ಲದ ಹಾಗೆ ಉಪಯೋಗಿಸುತ್ತಿದ್ದೆ. ಈಗ ನಮ್ಮಕ್ಕ ಸಾವಿತ್ರಿಯೂ ಒಳ್ಳೆಯ ಕೋಡುಬಳೆ, ಒಬ್ಬಟ್ಟು ತಯಾರಿಸುತ್ತಾಳೆ. ನಮ್ಮಮ್ಮನನ್ನೂ ಆಗಾಗ ಜ್ಞಾಪಿಸುತ್ತಾಳೆ. ಈ ಕೋಡುಬಳೆಯ ಒಂದು ವಿಶೇಷ ಏನೆಂದರೆ ನಾಲ್ಕು ದಿನ ಆದ ಮೇಲೆ ಮೊದಲಿನ ಕಠಿಣತೆಯನ್ನು ಕಳೆದುಕೊಂಡು ಮೆತ್ತಗಾಗಿದ್ದರೂ ಅದರ ರುಚಿ ಮಾತ್ರ ಮಾಸುವುದಿಲ್ಲ.

ಅಮ್ಮ ತಯಾರಿಸುತ್ತಿದ್ದ ಅವಿಯಲ್, ಮಜ್ಜಿಗೆ ಹುಳಿಗಳು ಪ್ರಸಿದ್ಧ. ಅನೇಕ ವಿಧದ ತರಕಾರಿಗಳು ಸ್ವಲ್ಪ ಸ್ವಲ್ಪ ಪ್ರಮಾಣದಲ್ಲಿದ್ದಾಗ–ಶ್ರಾದ್ಧ ನಡೆಸಿದ ಮರುದಿನ, ಅವಿಯಲ್ ತಯಾರಾಗುತ್ತಿತ್ತು. ಯಾವ ಮಲೆಯಾಳಿಯೂ ತಿಂದರೆ ಪ್ರಶಂಸೆ ಮಾಡಬೇಕು. ಅಷ್ಟೊಂದು ಕೊಬ್ಬರಿ ಎಣ್ಣೆಯ ರುಚಿ, ಬೂದು ಕುಂಬಳಕಾಯಿ ಮಜ್ಜಿಗೆ ಹುಳಿಯಂತೂ ಸರಿಯೆ, ಆದರೆ ಅಮ್ಮ ಹೊಸ ಎಕ್ಸ್‌ಪೆರಿಮೆಂಟ್ ಮಾಡಲು ಹಿಂತೆಗೆಯುತ್ತಿರಲಿಲ್ಲ. ಆದುದರಿಂದ ಅವರು ಬದನೆಕಾಯಿ, ಪಡವಲಕಾಯಿ ಅಥವಾ ನುಗ್ಗೇಕಾಯಿ, ಆಲುಗಡ್ಡೆ ಮಜ್ಜಿಗೆ ಹುಳಿಯನ್ನೂ ಪ್ರಯೋಗ ಮಾಡಿ ನಮ್ಮ ನಗೆಯ ಪ್ರತಿಕ್ರಿಯೆಯನ್ನು ನಗುವಿನೊಡನೆಯೇ ಸ್ವೀಕರಿಸುತ್ತಿದ್ದರು. ಮಜ್ಜಿಗೆ ಉಳಿದರೆ ಸೊಪ್ಪಿನ ದಂಟಿನಿಂದಲೂ, ಕೆಸುವಿನ ಗೆಡ್ಡೆಯಲ್ಲಿಯೂ ಸೊಗಸಾದ ನವಿರಾದ ಮಜ್ಜಿಗೆ ಹುಳಿ ಕುದಿಸಿ ಇಳಿಸುತ್ತಿದ್ದರು.

ರೇಷನ್ ಕಾಲದಲ್ಲಿ ಅಕ್ಕಿ ಕಡಿಮೆಯಾಗಿ ಸಿಗುತ್ತಿದ್ದು ಚಪಾತಿ, ಜೋಳದ ಮುದ್ದೆ, ರಾಗಿ ಮುದ್ದೆ, ಉಕ್ಕರಿಸಿದ ರಾಗಿ ರೊಟ್ಟಿ, ಜೋಳದ ರೊಟ್ಟಿ ಇವನ್ನೆಲ್ಲ ಅಮ್ಮ ತಯಾರಿಸುತ್ತಿದ್ದರು. ಆದರೆ ಅವರಿಗೆ ಈ ಪದಾರ್ಥಗಳ ಜೊತೆಗೆ ನೆಂಜಿಕೊಳ್ಳಲು ಯಾವ ಪದಾರ್ಥ ತಯಾರಿಸುವುದು ಗೊತ್ತಾಗುತ್ತಿರಲಿಲ್ಲ. ಅವರು ತಯಾರಿಸಿದುದನ್ನೆಲ್ಲ ಭಕ್ಷಿಸಲು ನಾವು ತಯಾರು. ಚಟ್ನಿಯೋ, ಗೊಜ್ಜೋ ಏನೋ ಒಂದು. ನಮ್ಮ ಅಣ್ಣನೂ ತಟ್ಟೆಯಲ್ಲಿ ನಮ್ಮಮ್ಮ ಏನು ಬಡಿಸಿದರೆ ಅದನ್ನು ಸಂತೋಷದಿಂದ ಊಟ ಮಾಡುತ್ತಿದ್ದರು. ನಮ್ಮ ಮಿತ್ರ ಶ್ರೀನಿವಾಸಯ್ಯ ಹೇಳುತ್ತಾನೆ, ಅವರ ಹಳ್ಳಿಯಲ್ಲಿ ರೇಷನ್ ಕಾಲದಲ್ಲಿ ನಿತ್ಯ ಒಬ್ಬಟ್ಟು ಮಾಡಿಕೊಂಡು ತಿನ್ನುತ್ತಿದ್ದರಂತೆ, ಅವರಿಗೋ ಗೋಧಿಯಲ್ಲಿ ಅದೊಂದೇ ಪದಾರ್ಥ ತಯಾರಿಸಲು ತಿಳಿದಿದ್ದಿತು!

ನಮ್ಮಣ್ಣ ಶಿವು ಕೆಲಸ ಮಾಡಲು ಬರೋಡ, ಮದರಾಸುಗಳಿಗೆ ಹೋಗಿ ಅಲ್ಲಿಂದ ಅವನಿಗೆ ಬರುತ್ತಿದ್ದ ಸಂಬಳದಲ್ಲಿ ಮೂವತ್ತು ಮೂವತ್ತೈದು ರೂಪಾಯಿಗಳನ್ನು ತಿಂಗಳು ತಿಂಗಳೂ ಅಮ್ಮನಿಗೆ ಕಳುಹಿಸಲು ಆರಂಭಿಸಿದ ಮೇಲೆ 1942–43ರಲ್ಲಿ ಅಮ್ಮನ ಆರ್ಥಿಕ ಬವಣೆ ಬಹುಮಟ್ಟಿಗೆ ನೀಗಿತು. ನಾನೂ ಕೆಲಸಕ್ಕೆ ಸೇರಿದ ಮೇಲೆ ಬಸವನಗುಡಿ, ಗಾಂಧಿಬಜಾರಿನ ರೇವಪ್ಪ ಅಂಗಡಿಯಲ್ಲಿ ಲೆಕ್ಕ ಇಟ್ಟು ತಿಂಗಳಿಗೆ ಬೇಕಾಗುವ ಸಾಮಾನುಗಳನ್ನೆಲ್ಲಾ ಒಟ್ಟಿಗೆ ಕೊಂಡುಕೊಂಡು ನಿರಾಳವಾಗಿ ಸಂಸಾರ ನಡೆಸಿ ಅಮ್ಮ ಬಹು ತೃಪ್ತಿ ಹೊಂದಿದರು. ಆಮೇಲೆ ಅವರು ಆಗಾಗ ಮಕ್ಕಳಿಗೆ ಇಷ್ಟವಾದ ಕರಿದ ತಿಂಡಿಗಳನ್ನು ಮಾಡಿಕೊಡುತ್ತಿದ್ದರು. ಅವರು ಮಾಡಿದ ಬಜ್ಜಿ ಬೋಂಡಗಳನ್ನು ತಿಂದರೆ ನಮಗೆ ಯಾರಿಗೂ ಆರೋಗ್ಯಕ್ಕೆ ಧಕ್ಕೆ ಆಗಲಿಲ್ಲ.

## ಹುಳಿ ಅವಲಕ್ಕಿ

ನಮ್ಮಮ್ಮ ಮಾಡುತ್ತಿದ್ದ ಅನೇಕ ರುಚಿಕರವಾದ ಅಡುಗೆಗಲ್ಲಿ ಹುಳಿ ಅವಲಕ್ಕಿ ಒಂದು. ಅವಲಕ್ಕಿಯನ್ನು ನೆನಸಿ ಅದಕ್ಕೆ ಹುಣಿಸೆಹಣ್ಣು ಗೊಜ್ಜು ಹಾಕಿ ಕಲೆಸಿ ಕಡಲೆಕಾಯಿ–ಉದ್ದು–ಕಡಲೆಬೇಳೆ–ಸಾಸಿವೆ–ಒಣ ಮೆಣಸಿನಕಾಯಿ ಒಗ್ಗರಣೆ ಹಾಕಿ ತಯಾರಿಸುವರು. ಗೊಜ್ಜಿನಲ್ಲಿ ಉಪ್ಪು, ಕಾರ, ಹುಳಿ, ಬೆಲ್ಲ, ಇಂಗು ಹದವಾದ ಪ್ರಮಾಣದಲ್ಲಿದ್ದು ಬಹು ರುಚಿಯಾಗಿರುತ್ತಿದ್ದಿತು. ನಮ್ಮ ತಾಯಿಯ ಅತಿ ದೊಡ್ಡ ಅಕ್ಕ, ರಾಜಕ್ಕ ನಮ್ಮ ಮನೆಗೆ ಬಂದಾಗಲೆಲ್ಲ ಶಾರದ ಸ್ವಲ್ಪ ಹುಳಿಅವಲಕ್ಕಿ ಮಾಡಿಕೊಡೆ ಎಂದು ಕೇಳಿ ಮಾಡಿಸಿಕೊಂಡು ಪ್ರೀತಿಯಿಂದ ತಿಂದು ಸಂತೋಷ ಪಡುತ್ತಿದ್ದರು. ನಮ್ಮ ಮನೆಗೆ ಬಂದಾಗಲೆಲ್ಲ ಹಿತ್ತಲಲ್ಲಿ ಬೆಳೆಸಿದ್ದ ಶುಂಡೆಕಾಯಿ ಗಿಡದಲ್ಲಿದ್ದ ಕಾಯಿಗಳನ್ನೆಲ್ಲ ಕಿತ್ತು ತೆಗೆದುಕೊಂಡು ಹೋಗುತ್ತಿದ್ದರು. ಶುಂಡೇಕಾಯಿ ಕಾಡು ಕಾಡಾಗಿ ಬೆಳೆದು ಆಳೆತ್ತರಕ್ಕೆ ಬರುತ್ತಿದ್ದ ಒಂದು ಮುಳ್ಳುಗಿಡ. ಇದರಲ್ಲಿ ಆಟ ಆಡುವ ಗೋಲಿಯ ಗಾತ್ರದ, ಅದೇ ರೀತಿ ಗುಂಡಗಿರುವ ಕಾಯಿ ಬಿಡುತ್ತದೆ. ಇದನ್ನು ತಿನ್ನಬಹುದು ಎಂದೇ ಕನ್ನಡದ ಜನರಿಗೆ ತಿಳಿಯದು. ಆದುದರಿಂದ ಯಾರೂ ಇದರ ತಂಟೆಗೆ ಬರುತ್ತಿರಲಿಲ್ಲ. ಆದರೆ ಅಮ್ಮನ ತಾಯಿ ತಮಿಳುನಾಡಿನಿಂದ ಬಂದವರಾದುದರಿಂದ ಅವರ ಮಕ್ಕಳಿಗೆಲ್ಲಾ ಇದರ ಪರಿಚಯ ಇದ್ದಿತು. ಶುಂಡೆ ಕಾಯಿನಲ್ಲಿ ಬೀಜ ತುಂಬಿರುತ್ತದೆ. ತುಂಬ ಎಳೆಸೂ, ಬಲಿತದ್ದೂ ಅಲ್ಲದ ಸ್ಥಿತಿಯಲ್ಲಿ ಕಿತ್ತು ಜಜ್ಜಿ ಒಳಗಿನ ಬೀಜವನ್ನೆಲ್ಲಾ ತೆಗೆದು ಹಾಕಿ ಕಾಯಿನ ಸಿಪ್ಪೆ ಮಾತ್ರ ಉಪಯೋಗಿಸಿ ಗೊಜ್ಜು ಅಥವಾ ಹುಳಿಯನ್ನು ಮಾಡಿದರೆ ಬಹು ರುಚಿಯಾಗಿರುತ್ತದೆ. ಈ ತರಕಾರಿ ಮಾರ್ಕೆಟ್ಟಿನಲ್ಲಿ ಸಿಗುವ ವಸ್ತು ಅಲ್ಲ. ಏಕೆಂದರೆ ಸಾಮಾನ್ಯ ಜನರಿಗೆ ಇದರ ಉಪಯೋಗದ ರೀತಿಯೇ ತಿಳಿದಿರಲಿಲ್ಲ. ಆದರೆ ನಮ್ಮ ಮನೆಯಲ್ಲಿ ಎಲ್ಲರೂ ಶುಂಡೆಕಾಯಿ ಹುಳಿ, ಗೊಜ್ಜನ್ನು ಇಷ್ಟ, ಪಟ್ಟು ತಿನ್ನುತ್ತೇವೆ. ಬಿಟ್ಟಿಯ ತರಕಾರಿ! ಹೀಗೆಯೇ ಅಮ್ಮ ಮಾಡುತ್ತಿದ್ದ ಖಾರದ ಕೂಟೂ ಸಹ ಪ್ರಸಿದ್ಧವಾಗಿತ್ತು.

*(ಕೃಪೆ: ಎಸ್. ನಂಜುಂಡಯ್ಯ ಅವರ 'ನಮ್ಮ ವಂಶವೃಕ್ಷ' ಪುಸ್ತಕ)*



■ ಎನ್. ಕೃಷ್ಣಸ್ವಾಮಿ

# ಹನಿಗವನಗಳು

## ಮಹಾಪೂಜೆ

ನಸುಕಿನಲಿ ಎದ್ದು
ನೆರೆಹೊರೆಯ ಹೂ ಕದ್ದು
ದೇವರಿಗಿರಿಸಿ ಬಿದ್ದು
ಮಾಡುವರೋ ಗಂಟೆಯಸದ್ದು!

## ಬಾಡಿಗೆ ಬಾಕಿ

ಬಾಡಿಗೆದಾರ ಹಾಯಾಗಿ
ಗುನುಗುತ್ತಿದ್ದರು ಖುಷಿಯಾಗಿ
ಅಲ್ಲಿರುವುದು ನಮ್ಮನೆ
ಇಲ್ಲಿರುವುದು ಸುಮ್ಮನೆ

## ಮಧ್ಯ ವಯಸ್ಸು

ಸೋಲ ಸಾಲಗಳ
ರಸ ನಿಮಿಷಗಳು
ತಿರುವು ಮುರುವಾಗಿ
ಸಾಲ ಸೋಲಗಳಾಗಿವೆ

## ಬದಲಾವಣೆ

ನನ್ನವಳಿದ್ದರೆ
ಕುಕ್ಕರ್ಸ್ತೀನಿ
ಇರದಿದ್ದರೆ
cookerಸ್ತೀನಿ

## Powers

ದೊರಕುವುದು ನಮ್ಮನೆಯಲ್ಲಿ
ನನಗೂ ಆಗಾಗ
'sweeping powers'
ಕಸುಗುಡಿಸಬೇಕಾದಾಗ!

## ಸಿಹಿ – ಕಹಿ

ನಾನು ಸರಿಯಾಗಿದ್ದರೆ
ಸಿಹಿ ದಾಂಪತ್ಯ
ಇರದಿದ್ದರೆ
ಏಕ್ ದಂ ಪಥ್ಯ!

## ನಳಪಾಕ

ನನ್ನ
ನಳಪಾಕ
ತಿಂದು
ದಮ್ಮಯ್ಯಂತೀ?

■ ನಂನಾಗ್ರಾಜ್



# ನನ್ನ ನಾಯಿಮರಿ

*ನಮ್ಮ ಮನೆಯಲಿರುವುದೊಂದು*
*ಮುದ್ದು ನಾಯಿಮರಿ.*
*ಅದಕೆ ಬಹಳ ಬುದ್ಧಿ ಉಂಟು,*
*ಯಾವುದದಕೆ ಸರಿ ?*

*ಕಂದು ಬಣ್ಣ, ಸುರುಳಿ ಬಾಲ,*
*ಕಿವಿಯು ನೆಟ್ಟಗೆ.*
*ಬೇರೆ ನಾಯಿ ಮನೆಗೆ ಬರಲು,*
*ಮೂತಿ ಸೊಟ್ಟಗೆ.*

*ನಮ್ಮ ನೋಡಿ ತಲೆಯ ತೂಗಿ*
*ಹಿಂದೆ ಬರುವುದು.*
*ಅತ್ತ ಇತ್ತ ಸುತ್ತಮುತ್ತ*
*ನೆಗೆದು ಕುಣಿವುದು.*

*ಇಟ್ಟ ಹಾಲು ಮತ್ತೆ ನೋಡೆ ಇಲ್ಲ;*
*ಮಟ್ಟಮಾಯ.*
*ನಾಯಿಮರಿಯ ಮೂತಿ ಬಿಳುಪು,*
*ನೋಡಿ ಅದರ ಬಾಯ.*

*"ನಾಯಿಮರಿ ನಾಯಿಮರಿ*
*ತಿಂಡಿ ಸಾಕೆ?" ಎಂದರೆ,*
*ತಲೆಯ ತೂಗಿ ಹೇಳುವುದಿದು –*
*"ಸಾಕೆ ಇಷ್ಟು ತಿಂದರೆ ?"*

■ ಗುಮ್ಮ





# ನೂತನ ಗೃಹಪ್ರವೇಶ

**ಸಂಘದ ಸದಸ್ಯ ಶ್ರೀ ರವಿಕಿರಣ್ ಟಿ. ಎನ್. ಮತ್ತು ಶ್ರೀಮತಿ ಭವಾನಿರವರು ರಾಜರಾಜೇಶ್ವರಿನಗರ, ಬಿ.ಇ.ಎಂ.ಎಲ್. ಲೇಔಟ್ (ಹಲಗೇವಡೇರಹಳ್ಳಿಯಲ್ಲಿ) ನಿರ್ಮಿಸಿರುವ ನೂತನ ಗೃಹ 'ಪ್ರಮಥ'ದ ಪ್ರವೇಶವನ್ನು ಇದೇ 1–5–2013ರಂದು ನೆರವೇರಿಸಿದ್ದಾರೆ. ಸಂಘವು ಶ್ರೀಮತಿ ಸರಸ್ವತಿ ನಾಗಭೂಷಣ ಕುಟುಂಬಕ್ಕೆ ಶುಭ ಕೋರುತ್ತದೆ.**

# ನೆನಪಿನಾಳದಿಂದ ಛಾಯಾಚಿತ್ರ – 1




ತಟ್ಟನಹಳ್ಳಿ ವೆಂಕಟಗಿರಿಯಪ್ಪನವರ ಕುಟುಂಬ (1960)          ಚಿತ್ರಕೃಪೆ: ಟಿ.ಎಲ್. ರಾಮಚಂದ್ರನ್, ಮುಂಬಯಿ